MAY 29, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ದಾವಣಗೆರೆ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿಗೆ,** 'ಅಮೃತ ಮಹೋತ್ಸವ' ಸಂಭ್ರಮ; ಇಂದು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಭಾಗಿ.
- **'ವಿಶ್ವ ಋತುಚಕ್ರ ನೈರ್ಮಲ್ಯ ದಿನ':** ಮೌಢ್ಯ ನಿರ್ಮೂಲನೆ, ಪರಿಸರ ಸ್ನೇಹಿ ಮುಟ್ಟಿನ ಉತ್ಪನ್ನಗಳ ಬಳಕೆ ಕುರಿತು, ಜಾಗೃತಿ.
- **ಚಾಮರಾಜನಗರ ಜಿಲ್ಲೆಯಲ್ಲಿ,** ವನ್ಯಜೀವಿಗಳ ಚಲನವಲನದ ಮೇಲೆ ನಿಗಾಕ್ಕೆ, ಕೃತಕ ಬುದ್ಧಿಮತ್ತೆ ಕ್ಯಾಮೆರಾ, ಕಣ್ಗಾವಲು.
- **ಮಂಡ್ಯದ ಪಿ.ಇ.ಟಿ. ಕ್ರೀಡಾಂಗಣದಲ್ಲಿ,** ಜೂನ್ 14 ರಿಂದ, ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಪಂದ್ಯಾವಳಿ.

<><><>

**ಬೆಳಗಾವಿಯ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ,** ಅಂಗ ಸಂಸ್ಥೆಯಾದ, ದಾವಣಗೆರೆಯ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನ, 75 ವರ್ಷಗಳ ಶೈಕ್ಷಣಿಕ ಸೇವೆಯ ಸ್ಮರಣಾರ್ಥ, ಇಂದು ಮಧ್ಯಾಹ್ನ 12.30ಕ್ಕೆ ಆಯೋಜಿತ, 'ಅಮೃತ ಮಹೋತ್ಸವ' ಸಮಾರಂಭದಲ್ಲಿ, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಪಾಲ್ಗೊಳ್ಳಲಿದ್ದಾರೆ. ಉಪ ಕುಲಪತಿ ಎಸ್.ವಿದ್ಯಾಶಂಕರ ಮಾಹಿತಿ ನೀಡಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಅಧ್ಯಕ್ಷ, ಪ್ರೊಫೆಸರ್ ಟಿ.ಜಿ. ಸೀತಾರಾಮ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ, ಪೀಠಾಧಿಪತಿ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ ಎಂದರು. ಸಾವಿರದ ಐನೂರು, ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು, ಭಾಗವಹಿಸಲಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆಯಲ್ಲಿ,** ಮೂರು ಕಿರು ಎಫ್.ಎಮ್. ಆಕಾಶವಾಣಿ ಕೇಂದ್ರಗಳ ಸ್ಥಾಪನೆಗೆ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯಕ್ಕೆ, ಮನವಿ ಸಲ್ಲಿಸಿದ್ದಾಗಿ, ಉಡುಪಿ, ಚಿಕ್ಕಮಗಳೂರು ಸಂಸದ, ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ದತ್ತ ಪೀಠ ಗಿರಿ ಧಾಮದಲ್ಲಿ, 10 ಕೆ.ವಿ. ಸಾಮರ್ಥ್ಯದ ಎಫ್.ಎಂ. ಕೇಂದ್ರ, ಮೂಡಿಗೆರೆ ಹಾಗೂ ಶೃಂಗೇರಿ ಭಾಗದಲ್ಲಿ, ಇನ್ನೆರಡು ಕಿರು ಎಫ್.ಎಂ. ಕೇಂದ್ರಗಳ ಸ್ಥಾಪನೆಗೆ, ಕೇಂದ್ರ ಸಚಿವ ಅಶ್ವಿನಿ ವೈಷ್ಣವ ಅವರಿಗೆ, ಮನವಿ ಸಲ್ಲಿಸಿದ್ದಾಗಿ, ಮಾಹಿತಿ ನೀಡಿದ್ದಾರೆ.

<><><>

**ಮೇ 28, 'ವಿಶ್ವ ಋತುಚಕ್ರ ನೈರ್ಮಲ್ಯ ದಿನ'ದ ಹಿನ್ನೆಲೆ,** ಋತುಚಕ್ರದ ಅವಧಿಯಲ್ಲಿ, ಶುಚಿತ್ವ ವಿಧಾನಗಳ ಅನುಸರಣೆ, ಗ್ರಾಮೀಣ ಮಹಿಳೆಯರು ತಮ್ಮ ಆರೋಗ್ಯವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಲು ಮಾರ್ಗದರ್ಶನ, ಮುಟ್ಟಿನ ಕುರಿತು, ಸಮಾಜದಲ್ಲಿರುವ ಮೌಢ್ಯಗಳ ನಿರ್ಮೂಲನೆ, ಪರಿಸರ ಸ್ನೇಹಿ ಮುಟ್ಟಿನ ಉತ್ಪನ್ನಗಳ ಬಳಕೆ ಕುರಿತು, ಮಹಿಳಾ ಜಾಗೃತಿ ಅಭಿಯಾನಗಳು, ಜರುಗಿದವು. ಸ್ತ್ರೀ ಆರೋಗ್ಯ ಹಾಗೂ ಪ್ರಸೂತಿಯ, ಹಿರಿಯ ತಜ್ಞೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಡಾಕ್ಟರ್ ಲೀಲಾದೇವಿ ನವಲಗುಂದ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕು,** ಚಂದಗುಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಬೆಳಸೂರು ಗ್ರಾಮದ ರಾಮಚಂದ್ರ ಗೋಪಾಲಭಟ್, ಹೆಜ್ಜೇನು ರಕ್ಷಣೆಯಲ್ಲಿ ಕಳೆದ 5 ದಶಕಗಳಿಂದ ತೊಡಗಿಸಿಕೊಂಡಿದ್ದಾರೆ. ಹೊಸ ದಿಲ್ಲಿಯ, ಭಾರತೀಯ ಜೇನು ಮಂಡಳಿ ಹಾಗೂ ಕೈಗಾರಿಕಾ ಇಲಾಖೆಯಿಂದ, ವೈಜ್ಞಾನಿಕ ಹೆಜ್ಜೇನು ಕೊಯ್ಲು ತರಬೇತಿ ಪಡೆದಿದ್ದು, 5 ಸಾವಿರಕ್ಕೂ ಹೆಚ್ಚು ಜನರಿಗೆ ಜೇನು ಸಾಕಣೆ, ಹೆಜ್ಜೇನು ಪುನರ್ವಸತಿ ಹಾಗೂ ಜೇನು ಕೃಷಿ ತರಬೇತಿ ನೀಡಿದ್ದಾರೆ.  ಜೇನು ಕೃಷಿಕ ಆರ್.ಜಿ.ಭಟ್, ಬೆಳಸೂರು, ಹೆಜ್ಜೇನುಗಳ ರಕ್ಷಣೆಗೆ, ಆಕಾಶವಾಣಿ ಮೂಲಕ, ಜನರಲ್ಲಿ ಮನವಿ ಮಾಡಿದ್ದಾರೆ.

<><><>

**ಚಾಮರಾಜನಗರ ಜಿಲ್ಲೆ, ಬಿಳಿಗಿರಿ ರಂಗನಾಥ ಸ್ವಾಮಿ** ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ, ವನ್ಯಜೀವಿಗಳ ಚಲನವಲನದ ಮೇಲೆ ನಿಗಾವಹಿಸಲು, ಕೃತಕ ಬುದ್ಧಿಮತ್ತೆ ಆಧಾರಿತ, ಅತ್ಯಾಧುನಿಕ ಕ್ಯಾಮೆರಾ, ಅರಣ್ಯ ಇಲಾಖೆ ಅಳವಡಿಸಿದೆ. ಸುವರ್ಣಾವತಿ ಜಲಾಶಯದ ಗಣೇಶನಗುಡಿ ಹತ್ತಿರ, ಆನೆಗಳು ಬಂದಾಗ, ತಕ್ಷಣ ಕ್ಯಾಮೆರಾ ಸೆರೆ ಹಿಡಿದು, ಸಂಬಂಧಪಟ್ಟ ಅರಣ್ಯಾಧಿಕಾರಿಗಳ ಮೊಬೈಲ್‌ಗೆ, ಸಂದೇಶ ರವಾನಿಸುತ್ತದೆ. ಜೊತೆಗೆ ಸೈರನ್ ಮೊಳಗಿ, ಆನೆಗಳು ಮತ್ತೆ ಕಾಡಿಗೆ ಹಿಂತಿರುಗುತ್ತವೆ. ದೇಶದಲ್ಲಿ ಅತೀಹೆಚ್ಚು ಆನೆಗಳನ್ನು ಹೊಂದಿರುವ ಹೆಗ್ಗಳಿಕೆ, ಕರ್ನಾಟಕಕ್ಕೆ ಸಲ್ಲುತ್ತದೆ. ಅತೀ ಹೆಚ್ಚು ಆನೆಗಳನ್ನು ಹೊಂದಿರುವ ಜಿಲ್ಲೆ, ಚಾಮರಾಜನಗರ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಪ್ರದೇಶ, ಕಾವೇರಿ ವನ್ಯಜೀವಿಧಾಮ ಹಾಗೂ ಮಲೈ ಮಹಾದೇಶ್ವರ ವನ್ಯಜೀವಿ ಧಾಮಗಳ ವ್ಯಾಪ್ತಿ ಹೊಂದಿದೆ.

<><><>

**ಅಳಿವಿನಂಚಿನಲ್ಲಿರುವ ಜೀವ ವೈವಿಧ್ಯದ ದಾಖಲಾತಿ,** ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಕೈಗೊಳ್ಳಬೇಕು; ಪಶ್ಚಿಮಘಟ್ಟಗಳ ಔ ’ಧೀಯ ಸಸ್ಯಗಳ ಸಮೀಕ್ಷೆ ಹಾಗೂ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು, ಜೀವವೈವಿಧ್ಯ ಮಂಡಳಿ, ರಾಜ್ಯಾಧ್ಯಕ್ಷ ವಡ್ನಾಳ ಜಗದೀಶ ಹೇಳಿದ್ದಾರೆ. ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದಲ್ಲಿ, ಪಶ್ಚಿಮಘಟ್ಟದ ಜೀವವೈವಿಧ್ಯ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು. ಪಂಚ ನದಿಗಳ ಉತ್ತರಕನ್ನಡ ಜಿಲ್ಲೆ, ನಾಡಿನ ಅಭಿವೃದ್ಧಿ ಯೋಜನೆಗಳಿಗಾಗಿ, ಅನೇಕ ತ್ಯಾಗ ಮಾಡಿದೆ ಎಂದರು.

<><><>

**ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇ ’ನ್,** ರಾಜ್ಯ ಮಟ್ಟದ ಯೋನಿಕ್ಸ್–ಸನ್‌ರೈಸ್ ರ್‍ಯಾಂಕಿಂಗ್, ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು, ಜೂನ್ 14 ರಿಂದ 20ರ ವರೆಗೆ, ಮಂಡ್ಯದ ಪಿ.ಇ.ಟಿ. ಕ್ರೀಡಾಂಗಣದಲ್ಲಿ ಆಯೋಜಿಸಿದೆ ಎಂದು, ಅಸೋಸಿಯೇ ’ನ್ ಅಧ್ಯಕ್ಷ ಕುಮಾರ ಬಂಗಾರಪ್ಪ ತಿಳಿಸಿದ್ದಾರೆ. ಮಂಡ್ಯದಲ್ಲಿ ಮಾತನಾಡಿದ ಅವರು, 19 ವ ’ರ್ದೊಳಗಿನವರು ಹಾಗೂ ಹಿರಿಯರ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, 700ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ, ಎಂದರು.

<><><>

**ಮೈಸೂರು ರಾಜ್ಯ, ಬ್ಯಾಡ್ಮಿಂಟನ್ ಅಸೋಸಿಯೇ ’ನ್,** 1951 ರಲ್ಲಿ ಸ್ಥಾಪಿತವಾಗಿದ್ದು, ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇ ’ನ್ ಎಂದು ಮರು ನಾಮಕರಣಗೊಂಡು, ವಜ್ರ ಮಹೋತ್ಸವದ ಹೊಸ್ತಿಲಲ್ಲಿದೆ. ರಾಜ್ಯದಲ್ಲಿ 10 ಸಾವಿರ ಬ್ಯಾಡ್ಮಿಂಟನ್ ಕೋರ್ಟ್ ಹಾಗೂ 4 ಲಕ್ಷದ 50 ಸಾವಿರ ಆಟಗಾರರಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ನಾಡಿದ್ದು 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ನಾಗರಿಕರು ತಮ್ಮ ಅಭಿಪ್ರಾಯಗಳನ್ನು, My Gov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ಹಂಚಿಕೊಳ್ಳಲು, ಇಂದು ಕೊನೆ ದಿನ.

<><><>

**ಬೆಂಗಳೂರು ಲೋಕ ಭವನಕ್ಕೆ ತೆರಳಿ,** ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ, ಸಿದ್ದರಾಮಯ್ಯ ಅವರು, ಹೊಸ ದಿಲ್ಲಿ ತಲುಪಿದ್ದಾರೆ.

<><><>

**ಉತ್ತರಕನ್ನಡ ಜಿಲ್ಲೆ ಭಟ್ಕಳಕ್ಕೆ,** ವಿಧಾನಸಭೆ ವಿಪಕ್ಷ ನಾಯಕ  ಆರ್.ಅಶೋಕ ಹಾಗೂ ಬಿ.ಜೆ.ಪಿ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದು ಭೇಟಿ ನೀಡಿ, ಕಪ್ಪೆಚಿಪ್ಪು ಹೆಕ್ಕುತ್ತ ಜಲ ಸಮಾಧಿಯಾದ, 11 ಜನರ ಕುಟುಂಬಗಳಿಗೆ ಸಾಂತ್ವನ ಹೇಳಲಿದ್ದಾರೆ.

<><><>

**ವಿಶ್ವಸಂಸ್ಥೆಯ ಕಾರ್ಯಾಚರಣೆಗಳಲ್ಲಿ** ಸೇವಾ ನಿರತ, ಶಾಂತಿಪಾಲಕರ ಧೈರ್ಯ ಮತ್ತು ತ್ಯಾಗವನ್ನು ಗೌರವಿಸುವ, ಅಂತಾರಾಷ್ಟ್ರೀಯ ದಿನಾಚರಣೆ, ಇಂದು.

<><><>

**ಅಂತಾರಾಷ್ಟ್ರೀಯ, ಮೌಂಟ್ ಎವರೆಸ್ಟ್ ದಿನವಿಂದು.** 1953ರ, ಮೇ 29 ರಂದು, ನ್ಯೂಜಿಲೆಂಡ್ ಪರ್ವತಾರೋಹಿ, ಸರ್ ಎಡ್ಮಂಡ್ ಹಿಲರಿ ಮತ್ತು ನೇಪಾಳದ ಶೆರ್ಪಾ ತೇನ್ಸಿಂಗ್ ನೋರ್ಗೆ, ಮೌಂಟ್ ಎವರೆಸ್ಟ್ ಯಶಸ್ವಿ ಚಾರಣವನ್ನು ಸ್ಮರಿಸಲಾಗುತ್ತದೆ.

<><><>

- **ದಾವಣಗೆರೆ ಯು.ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿಗೆ,** 'ಅಮೃತ ಮಹೋತ್ಸವ' ಸಂಭ್ರಮ; ಇಂದು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃ ್ಣನ್ ಭಾಗಿ.
- **'ವಿಶ್ವ ಋತುಚಕ್ರ ನೈರ್ಮಲ್ಯ ದಿನ'**; ಮೌಢ್ಯ ನಿರ್ಮೂಲನೆ, ಪರಿಸರ ಸ್ನೇಹಿ ಮುಟ್ಟಿನ ಉತ್ಪನ್ನಗಳ ಬಳಕೆ ಕುರಿತು, ಜಾಗೃತಿ.
- **ಚಾಮರಾಜನಗರ ಜಿಲ್ಲೆಯಲ್ಲಿ,** ವನ್ಯಜೀವಿಗಳ ಚಲನವಲನದ ಮೇಲೆ ನಿಗಾಕ್ಕೆ, ಕೃತಕ ಬುದ್ಧಿಮತ್ತೆ ಕ್ಯಾಮೆರಾ, ಕಣ್ಗಾವಲು.
- **ಮಂಡ್ಯದ ಪಿ.ಇ.ಟಿ. ಕ್ರೀಡಾಂಗಣದಲ್ಲಿ,** ಜೂನ್ 14 ರಿಂದ, ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಪಂದ್ಯಾವಳಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>